

# ಕೃಷಿಕರ ಹಬ್ಬ ಜಿ.ಕೆ.ವಿ.ಕೆ. ಕೃಷಿ ಮೇಳ - 2023




**ಡಾ. ಕೆ. ಶಿವರಾಮು ಮತ್ತು ಡಾ. ಎಂ. ಎ. ಮೂರ್ತಿ**
ಕೃಷಿ ಮಾಹಿತಿ ಘಟಕ, ಕೃವಿವಿ, ಜಿಕೆವಿಕೆ, ಬೆಂಗಳೂರು

ಸುಧಾರಿತ ಪದ್ಧತಿಗಳನ್ನು ಸಮರ್ಪಕವಾಗಿ ಆಚರಣೆಗೆ ತಂದಿರುವ ಪ್ರಾತ್ಯಕ್ಷಿಕೆ ಕ್ಷೇತ್ರಗಳಿಗೆ ಭೇಟಿ ನೀಡಿ ವಿಷಯದ ಪ್ರತ್ಯಕ್ಷ ಅನುಭವ ಪಡೆಯುವ ಸಾಧನವೇ ಕೃಷಿ ಮೇಳ. ಇದರಲ್ಲಿ ಕ್ಷೇತ್ರ ಸಂದರ್ಶನ, ತಜ್ಞರೊಂದಿಗೆ ಚರ್ಚೆ, ವಸ್ತು ಪ್ರದರ್ಶನ ಮುಂತಾದವುಗಳು ಅಡಕವಾಗಿವೆ. ಕೃಷಿ ಮೇಳವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ನಿರಂತರವಾಗಿ ಆಚರಿಸುತ್ತಾ ರೈತರು ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ ಕೃಷಿ ತಾಂತ್ರಿಕತೆಯ ಜ್ಞಾನದ ವಿವಿಧ ಮಜಲುಗಳನ್ನು ಪರಿಚಯ ಮಾಡಿಕೊಡುತ್ತಾ ಬಂದಿರುತ್ತದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ 1966 ರಲ್ಲಿ ಪ್ರಾರಂಭವಾದ ಕ್ಷೇತ್ರೋತ್ಸವವು ಕಾಲಾನುಕ್ರಮದಲ್ಲಿ ಕೃಷಿ ಮೇಳವಾಗಿ ಪರಿವರ್ತನೆಗೊಂಡು ಅತ್ಯಂತ ಜನಪ್ರಿಯಗೊಂಡಿದೆ. ಈ ವರ್ಷ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಕರ್ನಾಟಕ ಸರ್ಕಾರದ ಕೃಷಿ, ಜಲಾನಯನ ಅಭಿವೃದ್ಧಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ಹಾಲು ಮಹಾಮಂಡಳಿಗಳ ಸಂಯುಕ್ತ ಆಶ್ರಯದಲ್ಲಿ ಕೃ.ವಿ.ವಿ, ಬೆಂಗಳೂರಿನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಕೃಷಿ ಮೇಳವನ್ನು ನವೆಂಬರ್ 17 ರಿಂದ 20, 2023 ರವರೆಗೆ ನಾಲ್ಕು ದಿನಗಳ ಕಾಲ "ಉತ್ತಮ ಆಹಾರ, ಆರೋಗ್ಯ ಮತ್ತು ಆದಾಯಕ್ಕಾಗಿ ಸಿರಿಧಾನ್ಯಗಳು" ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಲಾಗುತ್ತಿದೆ.

**I. ನೂತನ ತಳಿಗಳು:** ಕೃಷಿ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿರುವ ಒಟ್ಟು ಐದು ತಳಿಗಳನ್ನು ಕೃಷಿಮೇಳದಲ್ಲಿ ಬಿಡುಗಡೆ ಮಾಡಲಾಗುವುದು.

**ರಾಗಿ:** ತಳಿ: ಎಂ.ಎಲ್.-322. ಕಾಲಾವಧಿ – 105-110 ದಿನಗಳು. ಇಳುವರಿ: ಧಾನ್ಯ – ಎಕರೆಗೆ 18 ರಿಂದ 20 ಕ್ವಿಂಟಾಲ್. ಹುಲ್ಲು – 5 ರಿಂದ 5.2 ಟನ್. ವಿಶೇಷ ಗುಣಲಕ್ಷಣಗಳು: ಗಟ್ಟಿಮುಟ್ಟಾದ ಕಾಂಡವನ್ನು ಹೊಂದಿದ್ದು, ತೆನೆ ನೆಲಕ್ಕೆ ಬೀಳುವುದಿಲ್ಲ. ಒಕ್ಕಣೆ ಮಾಡುವಾಗ ಹೊಟ್ಟಿನ ಧೂಳು ಕಡಿಮೆ. ಬೆಂಕಿ ರೋಗ ಮತ್ತು ಇಲುಕು ರೋಗಗಳಿಗೆ ನಿರೋಧಕ ಶಕ್ತಿ ಹೊಂದಿದೆ. ಶಿಫಾರಸ್ಸು ಮಾಡಿದ ವಲಯ: ವಲಯ-5. ವಿಜ್ಞಾನಿ: ಡಾ. ಮೋಹನ್ ರಾವ್. ದೂರವಾಣಿ: 9035983240, 9448101542

**ಸಾಮೆ:** ತಳಿ: ಜಿ.ಪಿ.ಯು.ಎಲ್.-11. ಕಾಲಾವಧಿ: 90-95 ದಿನಗಳು. ಇಳುವರಿ: ಧಾನ್ಯ – ಎಕರೆಗೆ 6 ರಿಂದ 8 ಕ್ವಿಂಟಾಲ್. ಮೇವು – ಎಕರೆಗೆ 1 ರಿಂದ 1.5 ಟನ್. ವಿಶೇಷ ಗುಣಲಕ್ಷಣಗಳು: ಮಧ್ಯಮ ಸಾಂದ್ರತೆ ಮತ್ತು ಆರ್ಕಿಡ್ ಆಕಾರದ ತೆನೆ. ಬೀಜಗಳು ಅಂಡಾಕಾರವಿದ್ದು ಬೂದು ಬಣ್ಣದಿಂದ ಕೂಡಿದೆ. ಎಲೆ ಅಂಗಮಾರಿ ರೋಗ ಮತ್ತು ತೆನೆ ಕಾಡಿಗೆ ರೋಗಕ್ಕೆ ನಿರೋಧಕತೆ ಹೊಂದಿದೆ. ಶಿಫಾರಸ್ಸು: ವಲಯ-5. ವಿಜ್ಞಾನಿ: ಡಾ. ಟಿ. ನಾಗರಾಜ. ದೂರವಾಣಿ: 9845948065

**ಸೂರ್ಯಕಾಂತಿ:** ತಳಿ: ಕೆ.ಬಿ.ಎಸ್.ಎಚ್.-85. ಕಾಲಾವಧಿ: 90-98 ದಿನಗಳು. ಇಳುವರಿ: ನೀರಾವರಿಯಲ್ಲಿ ಎಕರೆಗೆ 9-10 ಕ್ವಿಂಟಾಲ್. ಖುಷ್ಕಿಯಲ್ಲಿ ಎಕರೆಗೆ 6-7 ಕ್ವಿಂಟಾಲ್. ವಿಶೇಷ ಗುಣಲಕ್ಷಣಗಳು: ಕೇದಿಗೆ ರೋಗಕ್ಕೆ ನಿರೋಧಕ ಶಕ್ತಿ ಹೊಂದಿದೆ. ಶಿಫಾರಸ್ಸು: ಪೂರ್ಣ ಒಣ ವಲಯ (ವಲಯ-5). ವಿಜ್ಞಾನಿ: ಡಾ. ಎಸ್.ಡಿ. ನೆಹರು. ದೂರವಾಣಿ: 9480302554

**ಹಲಸು:** ತಳಿ: ಜಿಕೆವಿಕೆ ಕೆಂಪು ಹಲಸು. ವಿಶೇಷ ಗುಣಲಕ್ಷಣಗಳು: 3.5 ವರ್ಷಕ್ಕೆ ಫಸಲಿಗೆ ಬರುತ್ತದೆ. ಹಸಿರು ತೊಗಟೆ ಮತ್ತು ಕಡುಗೆಂಪು ತಾಮ್ರ ಬಣ್ಣದ ತೊಳೆಗಳೊಂದಿಗೆ ಉದ್ದ ಆಕಾರದ ಹಣ್ಣುಗಳು. ಅಂಟು ತುಂಬಾ ಕಡಿಮೆಯಿರುತ್ತದೆ. ಶಿಫಾರಸ್ಸು: ವಲಯ-5. ವಿಜ್ಞಾನಿ: ಡಾ. ಶ್ಯಾಮಲಮ್ಮ. ದೂರವಾಣಿ: 9448856958

**ಬರಗು:** ತಳಿ: ಜಿ.ಪಿ.ಯು.ಪಿ.-32. ಕಾಲಾವಧಿ: 80-85 ದಿನಗಳು. ಇಳುವರಿ: ಧಾನ್ಯ – ಎಕರೆಗೆ 7-8 ಕ್ವಿಂಟಾಲ್. ಮೇವು – ಎಕರೆಗೆ 1-1.25 ಟನ್. ವಿಶೇಷ ಗುಣಲಕ್ಷಣಗಳು: ಮಧ್ಯಮ ಸಾಂದ್ರತೆ ಮತ್ತು ಹರಡಿದ ಆಕಾರದ ತೆನೆಗಳು. ಹಳದಿ ಬೀಜಗಳು ಅಂಡಾಕಾರದಲ್ಲಿರುತ್ತವೆ. ಎಲೆ ಮತ್ತು ತೆನೆಗಳು ಕಾಡಿಗೆ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕತೆ ಹೊಂದಿವೆ. ಶಿಫಾರಸ್ಸು: ವಲಯ-5. ವಿಜ್ಞಾನಿ: ಡಾ. ಟಿ. ನಾಗರಾಜ. ದೂ: 9845948065.

**II. ಕೃಷಿ ಮೇಳದ ವೈಶಿಷ್ಟ್ಯತೆಗಳು:** 5 ಹೊಸ ತಳಿಗಳ ಬಿಡುಗಡೆ, ಕೃಷಿ ಸಾಧಕರಿಗೆ ಪುರಸ್ಕಾರ, ಭೌತಿಕವಾಗಿ ಮತ್ತು ಸಾಮಾಜಿಕ ಜಾಲತಾಣದಲ್ಲಿ ಮತ್ತು ಕೃಷಿ ತಂತ್ರಜ್ಞಾನ ಪ್ರಾತ್ಯಕ್ಷಿಕೆ ತಾಕುಗಳು.

**III. ಸುಧಾರಿತ ಕೃಷಿ ತಂತ್ರಜ್ಞಾನ ಪ್ರಾತ್ಯಕ್ಷಿಕೆಗಳು ಮತ್ತು ಕೃಷಿ ವಸ್ತು ಪ್ರದರ್ಶನ**

- ಕೃಷಿಯಲ್ಲಿ ನೂತನ ತಂತ್ರಜ್ಞಾನಗಳ ಮಾಹಿತಿ
- ಜಲಾನಯನ ನಿರ್ವಹಣೆ
- ತೋಟಗಾರಿಕೆ ಬೆಳೆಗಳು ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆಗಳು
- ಪಶುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಹಾಗೂ ಮೀನು ಸಾಕಣೆ
- ಸಿರಿಧಾನ್ಯಗಳು ಹಾಗೂ ಅವುಗಳ ಮಹತ್ವ



ಜಿ.ಪಿ.ಯು.ಪಿ.-32 ಬರಗು

- ಔಷಧೀಯ ಮತ್ತು ಸುಗಂಧಯುಕ್ತ ಸಸ್ಯಗಳು
- ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆಗಳು
- ಮಳೆ ಹಾಗೂ ಮೇಲ್ಛಾವಣಿ ನೀರಿನ ಕೊಯ್ಲು
- ಸಮಗ್ರ ಪೀಡೆ ಹಾಗೂ ಪೋಷಕಾಂಶಗಳ ನಿರ್ವಹಣೆ
- ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ
- ಕೃಷಿಯಲ್ಲಿ ಡ್ರೋನ್ ಬಳಕೆ
- ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನಗಳು
- ಸಾವಯವ ಕೃಷಿ ಪದ್ಧತಿಗಳು
- ಮಾರುಕಟ್ಟೆ ನೈಪುಣ್ಯತೆ ಮಾಹಿತಿ
- ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ
- ಬಿತ್ತನೆ ಬೀಜಗಳ ಮೊಳಕೆ ಪರೀಕ್ಷೆ ಹಾಗೂ ಶೇಖರಣೆ
- ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆಗಳು
- ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ
- ಹವಾಮಾನ ಚತುರ ಕೃಷಿ
- ರೈತರ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ
- ರೈತರಿಂದ ರೈತರಿಗೆ ಚರ್ಚಾಗೋಷ್ಠಿ
- ಕೃಷಿ ಪರಿಕರಗಳ ಹಾಗೂ ಪ್ರಕಟಣೆಗಳ ಮಾರಾಟ


ಎಂ.ಎಲ್.-322 ರಾಗಿ


ಸಾಮೆ-ಜಿಪಿಯುಎಲ್ 11


ಕೆ.ಬಿ.ಎಸ್.ಎಚ್.-85 ಸೂರ್ಯಕಾಂತಿ


ಜಿಕೆವಿಕೆ ಕೆಂಪು ಹಲಸು

### IV. ಕೃಷಿ ಸಾಧಕರಿಗೆ ಪುರಸ್ಕಾರ

ಅ) ರಾಜ್ಯಮಟ್ಟದ ಪ್ರಶಸ್ತಿಗಳು: ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಅವುಗಳೆಂದರೆ –

1. ಮಾಜಿ ಪ್ರಧಾನಮಂತ್ರಿ ಶ್ರೀ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ
2. ಡಾ. ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ
3. ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ
4. ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ
5. ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ

#### ಆ) ಜಿಲ್ಲಾ ಮಟ್ಟದ ಪ್ರಶಸ್ತಿಗಳು

**ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿ:** ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 10 ಜಿಲ್ಲೆಗಳಲ್ಲಿ ಪ್ರಗತಿಪರ ರೈತ ಪ್ರಶಸ್ತಿ ಮತ್ತು ಪ್ರಗತಿಪರ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ ನೀಡಲಾಗುವುದು.

#### ಇ) ತಾಲ್ಲೂಕು ಮಟ್ಟದ ಪ್ರಶಸ್ತಿಗಳು

**ತಾಲ್ಲೂಕು ಮಟ್ಟದ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಯುವ ರೈತ ಮಹಿಳಾ ಪ್ರಶಸ್ತಿ:** ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 61 ತಾಲ್ಲೂಕುಗಳಲ್ಲಿ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಯುವ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿಪರ ಯುವ ರೈತ ಮತ್ತು ಯುವ ರೈತ ಮಹಿಳೆಯರಿಗೆ ನೀಡಲಾಗುವುದು. ಅಭ್ಯರ್ಥಿಗಳ ವಯಸ್ಸು 35 ವರ್ಷ ಮೀರಿರಬಾರದು.

### V. ಕೃಷಿ ವಸ್ತು ಪ್ರದರ್ಶನ

ಕೃ.ವಿ.ವಿ. ಬೆಂಗಳೂರು ಮಳಿಗೆಗಳು, ಕೃಷಿ ಸಂಬಂಧಿ ವಿಶ್ವವಿದ್ಯಾನಿಲಯಗಳು - ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳ ಮಳಿಗೆಗಳು, ಕೃಷಿ ಇಂಜಿನಿಯರಿಂಗ್ ಮತ್ತು ಪಶುಸಂಗೋಪನೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ನೂತನ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗುವುದು. ರೈತರ ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ವೈಜ್ಞಾನಿಕ ಸಲಹೆ, ತಜ್ಞ ವಿಜ್ಞಾನಿಗಳ ತಂಡದಿಂದ ಕೃಷಿ ಸಂಬಂಧಿ ಪ್ರಶ್ನೆಗಳಿಗೆ ಭೌತಿಕವಾಗಿ ಮತ್ತು ಝೂಮ್ ಸಭೆಯ ಮೂಲಕ ನೇರ ಪರಿಹಾರ, ಪ್ರಾತ್ಯಕ್ಷಿಕಾ ತಾಕುಗಳು, ಮಳಿಗೆಗಳು ಮತ್ತು ಕೃಷಿ ಮೇಳದ ಕಾರ್ಯಕ್ರಮವನ್ನು ಸಾಮಾಜಿಕ ಜಾಲತಾಣದಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

### VI. ವಿಶೇಷ ಸವಲತ್ತುಗಳು:

ಜಿಕೆವಿಕೆಯ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ, ಪ್ರತ್ಯೇಕ ವಾಹನ ನಿಲುಗಡೆ ವ್ಯವಸ್ಥೆ, ಉಚಿತ ಪ್ರವೇಶ ಮತ್ತು ರಿಯಾಯಿತಿ ದರದಲ್ಲಿ ಊಟ. ■